# ‘ಋಷಿಗಳ ದೃಷ್ಟಿ ಸೂಕ್ಷ್ಮ, ಸಮಗ್ರ’

ಪ್ರಜಾವಾಣಿ ವಾರ್ತೆ

ಶಿರಸಿ: ಋಷಿಗಳ ದೃಷ್ಟಿ ಸೂಕ್ಷ್ಮ ಮತ್ತು ಸಮಗ್ರ ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಚಾತುರ್ಮಾಸ ಸಂದರ್ಭದಲ್ಲಿ ಗುರುವಾರ ಮಠದ ಶಿಷ್ಯರಾದ ಬನವಾಸಿ, ಬದನಗೋಡು, ತವನಂದಿ ಸೀಮೆಯ ಸಮಸ್ತ ಭಕ್ತರಿಂದ ಭಿಕ್ಷಾ ಹಾಗೂ ಪಾದಪೂಜೆ ಸೇವೆ ಸ್ವೀಕರಿಸಿ ಆಶೀರ್ವಚನ ನೀಡಿದರು.

‘ಋಷಿಗಳು ಗಮನಿಸಿರುವ ಪ್ರತಿಯೊಂದು ವಿಷಯಗಳಲ್ಲಿ ಸೂಕ್ಷ್ಮ ಹಾಗೂ ಸಮಗ್ರತೆಯನ್ನು ಕಾಣಬಹುದು. ಅವರ ದೃಷ್ಟಿ ಆಮೂಲಾಗ್ರವಾಗಿ ಹಾಗೂ ತಳಸ್ಪರ್ಶಿಯಾಗಿ ಇರುವುದು ಕಂಡುಬರುತ್ತದೆ. ಅವರು ಬರೆದಂತಹ ಎಲ್ಲ ಗ್ರಂಥಗಳಲ್ಲೂ ಅವರ ದೃಷ್ಟಿಯನ್ನು ನೋಡಬಹುದು. ಯಾವುದೇ ಶಾಸ್ತ್ರ, ವೇದಾಂತ, ಯೋಗ, ಆಯುರ್ವೇದ, ಪಾಕಶಾಸ್ತ್ರ ಇವೆಲ್ಲದರಲ್ಲೂ ಅವರು ಗಮನ ಹರಿಸಿರುವುದನ್ನು ಕಂಡುಕೊಳ್ಳಬಹುದು’ ಎಂದರು.

‘ಋಷಿ ಮುನಿಗಳ ಚಿಂತನೆಗಳು ಆಧುನಿಕರ ದೃಷ್ಟಿಯಲ್ಲಿ ಕಾಣಲು ಸಾಧ್ಯವಿಲ್ಲ. ಆಧುನಿಕರ ದೃಷ್ಟಿಯಲ್ಲಿ ಸಂಕುಚಿತ ದೃಷ್ಟಿ ಕಾಣುತ್ತವೆ. ಆಧುನಿಕರ ಮಾತುಗಳು ಬದಲಾವಣೆ ಹೊಂದುತ್ತ ಇರುತ್ತದೆ. ಋಷಿಗಳ ಅಧ್ಯಯನ ಹಾಗಲ್ಲ’ ಎಂದರು.

ಸೀಮೆಯ ಮಾತೆಯರು ಮತ್ತು ಮಹನೀಯರು ಶ್ರದ್ಧಾ ಭಕ್ತಿಯಿಂದ ತಮ್ಮ ಸೇವೆ ಸಲ್ಲಿಸಿದರು.

ಬೆಳಿಗ್ಗೆಯಿಂದ ಮಾತೆಯರು ಶಂಕರ ಸ್ತೋತ್ರ ಪಠಣ, ಭಗವದ್ಗೀತಾ ಪಠಣ ಹಾಗೂ ಲಲಿತಾ ಸಹಸ್ರನಾಮದಿಂದ ಅರ್ಚನೆ ಮಾಡಿದರು. ಮಹನೀಯರು ಗಾಯತ್ರೀ ಅನುಷ್ಠಾನ ಕೈಗೊಂಡರು. ಸೀಮೆಯ ಪ್ರಮುಖರಾದ ಅನಂತ ಭಟ್ ಬೆಂಗಳೆ, ಶ್ರೀಪಾದ್ ರಾಯ್ಸದ್, ಶ್ರೀಪಾದ್ ಹೆಗಡೆ ಬಸೂರು ಇದ್ದರು. ಆರ್.ಎಸ್. ಹೆಗಡೆ ಭೈರುಂಬೆ ನಿರ್ವಹಿಸಿದರು.



ಶಿರಸಿಯ ಸ್ವರ್ಣವಲ್ಲೀ ಮಠಾಧೀಶ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿದರು